**ದಿನಾಂಕ 8–5–2020 ರಂದು ಮಧ್ಯಾಹ್ನ 12.30 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, | ಸದಸ್ಯರು |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು |
| 4. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು |
| 5. | ಶ್ರೀ ಕೊಟ್ರಪ್ಪ ಬಿ. ಕೊರೇರ್, ರಾಯಚೂರು | ಸದಸ್ಯರು |
| 6. | ಡಾ॥ ಎಂ.ಆರ್. ದಿನೇಶ್, ನಿರ್ದೇಶಕರು, ಐ.ಐ.ಹೆಚ್.ಆರ್. ಬೆಂಗಳೂರು (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು |
| 7. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ, ಘನತೆವೆತ್ತ ರಾಜ್ಯಪಾಲರಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ನೂತನವಾಗಿ ನೇಮಕ ಹೊಂದಿದ ಶ್ರೀ ಕೊಟ್ರಪ್ಪ ಬಿ. ಕೊರೇರ್ ಇವರನ್ನು ಪರಿಚಯಿಸುತ್ತಾ, ಸ್ವಾಗತ ಕೋರಿದರು ಹಾಗೂ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ತದನಂತರ, ಕೊರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ತರಾಯಿಸಲಾಯಿತು:

| | |
|---|---|
| **ಐಟಂ–1** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು.**<br><br>**ಠರಾವು:**<br>ದಿನಾಂಕ 26–2–2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |
| **ಐಟಂ–2** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ನಡವಳಿಗಳನುಸಾರ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br><br>**ಠರಾವು:**<br>ದಿನಾಂಕ 26–2–2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು ಹಾಗೂ ಈ ಕೆಳಗಿನಂತೆ ನಿರ್ಣಯಿಸಲಾಯಿತು:<br><br>**ಐಟಂ ಸಂಖ್ಯೆ 13: ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪ್ರಾಧ್ಯಾಪಕರನ್ನು ಹೆಚ್.ಎ.ಜಿ. ವೇತನ ಶ್ರೇಣಿಗೆ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**<br>**ಠರಾವು:**<br>ರಾಯಚೂರು ಕೃವಿವಿ.ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕರು |

/ ಹೆಚ್.ಎ.ಜಿ. ಎಂದು ಪದೋನ್ನತಿ ನೀಡುವ ಸಂಬಂಧ ಕೃವಿವಿ., ಅಧಿಸೂಚನೆ ದಿನಾಂಕ 11–7–2013, ಕರ್ನಾಟಕ ಸರ್ಕಾರದ ಆದೇಶ ದಿನಾಂಕ 24–3–2010, ವಿಶ್ವವಿದ್ಯಾಲಯ ಧನಸಹಾಯಕ ಆಯೋಗ, ನವದೆಹಲಿ ಇವರ ಪತ್ರ ಸಂಖ್ಯೆ **UGC No. F.3-1/2009 dated 30 June, 2010,** ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ ನವದೆಹಲಿಯ ಇವರ ಪತ್ರ ಸಂಖ್ಯೆ **F.No. 1(01)/2009-Per-IV dated 02 August, 2010** ರಲ್ಲಿ ಉಪಬಂಧಿಸಿದಂತೆ ವಿವರವಾದ ಪ್ರಸ್ತಾವನೆಯನ್ನು ಪದೋನ್ನತಿ ನೀಡಿದ್ದಲ್ಲಿ ತಗಲುವ ವೆಚ್ಚದ ಮೊತ್ತದ ವಿವರಗಳೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**(ಕ್ರಮ : ಕುಲಸಚಿವರು)**

**ಐಟಂ–3** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2019–20 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2020–21 ನೇ ಸಾಲಿನ ಅಂದಾಜು ಆಯವ್ಯಯ.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಈ ಕೆಳಗೆ ಮಂಡಿಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2020–21ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಕೃವಿವಿ ಅಧಿನಿಯಮದ ಕಲಂ 13(2)(i) ಹಾಗೂ 39(2) ಅಡಿಯಲ್ಲಿ ಉಪಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**I. ರಾಯಚೂರು ಕೃವಿವಿ ಯ 2019–20ನೇ ಸಾಲಿನ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ:**

| ಕ್ರ.ಸಂ | ವಿವರಗಳು | 2019–20 ನೇ ಸಾಲಿನ ಅಂದಾಜು ಆಯವ್ಯಯ | 2019–20 ನೇ ಸಾಲಿನ ಪರಿಷ್ಕೃತ ಆಯವ್ಯಯ |
|---|---|---|---|
| I | ಕೃಷಿ ಸಂಶೋಧನೆ | | |
| 1 | ಆಡಳಿತ ಕಛೇರಿಗಳು | 28,83,88,700.00 | 30,26,44,374.00 |
| 2 | ಕೃಷಿ ಮಹಾವಿದ್ಯಾಲಯಗಳು | 21,78,42,800.00 | 25,44,70,850.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 16,79,55,100.00 | 20,47,25,642.00 |
| 4 | ಕೃಷಿ ವಿಸ್ತರಣಾ ಘಟಕಗಳು | 2,43,13,400.00 | 2,90,12,326.00 |
| | ಮೊತ್ತ | **69,85,00,000.00** | **79,08,53,192.00** |
| II | ಸಾಮಾನ್ಯ | | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 11,00,00,000.00 | 11,60,90,000.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 0.00 | 0.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 0.00 | 0.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 15,58,00,000.00 | 18,76,00,456.00 |
| | ಮೊತ್ತ | **26,58,00,000.00** | **30,36,19,456.00** |
| III | ಇತರೆ ಯೋಜನೆಗಳು (GOK) | | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 4,66,49,706.00 | 4,66,49,706.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 3,26,43,412.00 | 3,26,43,415.00 |
| 3 | ಭೂ–ಸ್ವಾಧೀನ (Land Acquisition) | 6,92,78,634.00 | 6,92,78,634.00 |
| 4 | RIDF-20 (ನಬಾರ್ಡ) | 34,35,696.00 | 2,55,00,000.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 6,00,00,000.00 | 7,18,34,878.00 |
| | ಮೊತ್ತ | **21,20,07,448.00** | **24,59,06,633.00** |
| IV | ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ | | |
| 1 | ಎ.ಐ.ಸಿ.ಆರ್.ಪಿ. ಯೋಜನೆಗಳು | 3,45,34,973.00 | 12,21,12,783.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 | 12,13,36,363.00 |
| 3 | ಅಭಿವೃದ್ಧಿ ಅನುದಾನ (ICAR-SAU) | 6,00,00,000.00 | 2,33,13,555.00 |
| | ಮೊತ್ತ | **19,45,34,973.00** | **26,67,62,701.00** |

| | | | |
|---|---|---|---|
| V | ಆಡ್ಹಾಕ್ ಯೋಜನೆಗಳು | | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 | 32,98,36,069.00 |
| | ಮೊತ್ತ | **30,00,00,000.00** | **32,98,36,069.00** |
| VI | ಇತರೆ | | |
| 1 | ಸುಜಲಾ III ಯೋಜನೆ | 3,00,00,000.00 | 3,19,65,624.00 |
| 2 | ಡಿ.ಎಸ್.ಟಿ. ಯೋಜನೆ | 40,00,000.00 | 0.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,000.00 | 21,40,502.00 |
| 4 | ಎನ್. ಆರ್. ಐ. ಅನುದಾನ | 5,35,00,000.00 | 6,00,00,000.00 |
| 5 | ಆವರ್ತ ನಿಧಿ ಯೋಜನೆಗಳು | 0.00 | 33,71,91,635.00 |
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 | 1,99,41,86,758.00 |
| | ಮೊತ್ತ | **8,96,40,000.00** | **2,42,54,84,519.00** |
| | ಒಟ್ಟು ಮೊತ್ತ | **1,76,04,82,421.00** | **4,36,25,33,570.00** |

## II. ರಾಯಚೂರು ಕೃಷಿ ವಿಶ್ವವಿದ್ಯಾಲಯದ 2020-21 ನೇ ಸಾಲಿನ ಅಂದಾಜು ಆಯವ್ಯಯ:

| ಕ್ರ.ಸಂ | ವಿವರಗಳು | 2020 ನೇ ಸಾಲಿನ ಅಂದಾಜು ಆಯವ್ಯಯ |
|---|---|---|
| **I** | **ಕೃಷಿ ಸಂಶೋಧನೆ** | |
| 1 | ಆಡಳಿತ ಕಛೇರಿಗಳು | 27,33,46,700.00 |
| 2 | ಕೃಷಿ ಮಹಾವಿದ್ಯಾಲಯಗಳು | 24,74,77,500.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 20,91,40,300.00 |
| 4 | ಕೃಷಿ ವಿಸ್ತರಣಾ ಘಟಕಗಳು | 3,12,35,500.00 |
| | ಮೊತ್ತ | **76,12,00,000.00** |
| **II** | **ಸಾಮಾನ್ಯ** | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 5,81,00,000.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 74,00,000.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 45,00,000.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 9,44,00,000.00 |
| | ಮೊತ್ತ | **16,44,00,000.00** |
| **III** | **ಇತರೆ ಯೋಜನೆಗಳು (GOK)** | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 4,92,40,012.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 3,55,51,035.00 |
| 3 | ಭೂ-ಸ್ವಾಧೀನ (Land Acquisition) | 6,92,78,634.00 |
| 4 | RIDF-20 (ನಬಾರ್ಡ) | 34,35,696.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 11,28,00,000.00 |
| | ಮೊತ್ತ | **27,03,05,377.00** |
| **IV** | **ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ** | |
| 1 | ಎ.ಐ.ಸಿಆರ್.ಪಿ. ಯೋಜನೆಗಳು | 5,00,00,000.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 |
| 3 | ಅಭಿವೃದ್ಧಿ ಅನುದಾನ (ICAR-SAU) | 5,00,00,000.00 |
| | ಮೊತ್ತ | **20,00,00,000.00** |
| **V** | **ಆಡ್ಹಾಕ್ ಯೋಜನೆಗಳು** | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 |
| | ಮೊತ್ತ | **30,00,00,000.00** |

| | | |
|---|---|---|
| VI | ಇತರೆ | |
| 1 | ಸುಜಾಲಾ III ಯೋಜನೆ | 4,20,00,000.00 |
| 2 | ಡಿ.ಎಸ್.ಟಿ. ಯೋಜನೆ | 0.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,502.00 |
| 4 | ಎನ್. ಆರ್. ಐ. ಅನುದಾನ | 6,00,00,000.00 |
| 5 | ಆವರ್ತ ನಿಧಿ ಯೋಜನೆಗಳು | 0.00 |
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 |
| | **ಮೊತ್ತ** | **10,41,40,502.00** |
| | **ಒಟ್ಟು ಮೊತ್ತ** | **1,80,00,45,879.00** |

ಮುಂದುವರೆದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಸಂ. ಕೃಇ 11 ಕೃವಿರಾ 2020 (ಇ–ಆಫೀಸ್) ದಿನಾಂಕ 18–4–2020, No. FD 2 TFP 2020 dated 28-4-2020, No. FD 10 SRP 2020 dated 5-5-2020 ಮತ್ತು ಸಂ. ಆಇ 2(ಇ)ಸೇನಿಸೇ 2020 ದಿನಾಂಕ 5–5–2020 ಗಳನ್ನು ಪರಿಪಾಲಿಸಿ, ಖರ್ಚು ವೆಚ್ಚಗಳನ್ನು ನಿರ್ವಹಿಸಬೇಕೆಂದು ನಿರ್ಣಯಿಸಲಾಯಿತು.

ಅಲ್ಲದೇ, ವಿಶ್ವವಿದ್ಯಾಲಯದ ಆಂತರಿಕ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಲು ವಿವಿಧ ಕೃಷಿ ಚಟುವಟಿಕೆಗಳಾದ ಬೀಜೋತ್ಪಾದನೆ, ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆ, ಹೆಸರಘಟ್ಟ ಇವರು ಬಿಡುಗಡೆಗೊಳಿಸಿದ ತರಕಾರಿ ತಳಿಗಳ ಬೀಜೋತ್ಪಾದನೆ, ಹಣ್ಣು ಬೆಳೆಗಳ ಕಸಿ ತಯಾರಿಕೆ, ತ್ಯಾಜ್ಯ ಪರಿವರ್ತನೆ, ಜೈವಿಕ ಗೊಬ್ಬರಗಳ ಉತ್ಪಾದನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳುವುದು, ಕೃವಿವಿ., ವಿಜ್ಞಾನಿಗಳವರು ಹೆಚ್ಚಿನ ಸಂಖ್ಯೆಯಲ್ಲಿ ಅನುದಾನಿತ ಸಂಸ್ಥೆಗಳಿಂದ ಆಡ್‌ಹಾಕ್ ಯೋಜನೆಗಳನ್ನು ಪಡೆಯಲು ಹಾಗೂ ಬಾಹ್ಯವಾಗಿ ಧನಸಹಾಯ ನೀಡುವ ಸಂಸ್ಥೆಗಳೊಂದಿಗೆ ಉನ್ನತ ತಂತ್ರಜ್ಞಾನಗಳ ವರ್ಗಾವಣೆಯ ಕುರಿತು ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ಆದಾಯವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಮಂಡಲಿಯು ಸಲಹೆ ನೀಡಿತು ಮತ್ತು ಅದನ್ನು ಅನುಷ್ಠಾನಕ್ಕೆ ತರಲು ಸೂಚಿಸಿತು.

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ಆಡಳಿತಾಧಿಕಾರಿಗಳು)**

**ಐಟಂ–4** **ಇ–ಸ್ಯಾಪ್ ತಂತ್ರಾಂಶವನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘಗಳಿಗೆ (3500 ಬಳಕೆದಾರರಿಗೆ) ತೋಟಗಾರಿಕಾ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ರೂ. 67,00,000/– (ತೆರಿಗೆಯನ್ನು ಹೊರತುಪಡಿಸಿ) ತಂತ್ರಾಂಶ ನಿರ್ವಹಣೆಗೆ ಅನುಮೋದನೆ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಇ–ಸ್ಯಾಪ್ ತಂತ್ರಾಂಶವನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘದ ಕ್ಷೇತ್ರ ಬಳಕೆದಾರರಿಗೆ ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆಗಾಗಿ 2020–21 ನೇ ಸಾಲಿಗಾಗಿ ರೂ. 67,00,000/– ಗಳು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು/ ಡಾ.ಎ. ಪ್ರಭುರಾಜ, ಪ್ರಾಧ್ಯಾಪಕರು)**

**ಐಟಂ–5** **ಡಾ. ವಿಕ್ರಂ ಸಿಂಹ, ಹೆಚ್.ವಿ., ಸಹಾಯಕ ಪ್ರಾಧ್ಯಾಪಕರು (ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ), ಕೃಷಿ ವಿಜ್ಞಾನ ಕೇಂದ್ರ, ರದ್ದೇವಾಡಗಿ ಇವರನ್ನು ಕೇರಳ ಕೃಷಿ ವಿಶ್ವವಿದ್ಯಾಲಯದ, ತಿರುಚ್ಚುರಿಗೆ ನಿಯೋಜನೆ ಮಾಡಲು ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಡಾ. ವಿಕ್ರಮ್ ಸಿಂಹ, ಸಹಾಯಕ ಪ್ರಾಧ್ಯಾಪಕರು (ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ), ಕೃಷಿ ವಿಜ್ಞಾನ ಕೇಂದ್ರ ರದ್ದೇವಾಡಗಿ, ಕೃವಿವಿ ರಾಯಚೂರು, ಇವರನ್ನು ಕೇರಳ ಕೃಷಿ ವಿಶ್ವವಿದ್ಯಾಲಯ, ತ್ರಿಚ್ಚೂರಿಗೆ 3 ವರ್ಷಗಳ ಅವಧಿಗೆ ಲೀನ್ ಆಧಾರದ ಮೇಲೆ ನಿಯೋಜಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಕೇರಳ ಕೃಷಿ ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ಸರ್ಕಾರದ ಮುಖಾಂತರ ಪತ್ರವನ್ನು ಬರೆದು, ಕೇರಳ ಕೃಷಿ ವಿಶ್ವವಿದ್ಯಾಲಯದ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು)**

| | |
|---|---|
| ಐಟಂ–6 | **ಅಧಿಕೃತ ಮಾರಾಟಗಾರರಿಂದ ಜೆ.ಸಿ.ಬಿ. ವಾಹನವನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಜೆ.ಸಿ.ಬಿ. ವಾಹನವನ್ನು ಖರೀದಿಸುವ ಪ್ರಸ್ತಾವನೆಯನ್ನು ಕೈಬಿಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. **(ಕ್ರಮ: ಸರಕು ಖರೀದಿ ಅಧಿಕಾರಿ)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ–1 | **ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಪ್ರಸ್ತಾಪಿತ ಕರಡು ಏಕರೂಪದ ಪರಿನಿಯಮಗಳಲ್ಲಿ ತಾಂತ್ರಿಕ ಅಧಿಕಾರಿಗಳಿಗೆ Lateral Entry ಮುಖಾಂತರ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ನೀಡುವ ವಿಷಯವನ್ನು ಸೇರ್ಪಡೆ ಮಾಡಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಸದರಿ ವಿಷಯದ ಕುರಿತು ಸರ್ಕಾರವು ಕೋರಿರುವ ಮಾಹಿತಿಯನ್ನು ಕ್ರೂಢೀಕರಿಸಿ, ಸಮಗ್ರ ಪ್ರಸ್ತಾವನೆಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. **(ಕ್ರಮ : ಕುಲಸಚಿವರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1 | **ರಾಯಚೂರು ಕೃವಿವಿದ ಅಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿ ಅಡಿಯಲ್ಲಿ ಕಲ್ಯಾಣ–ಕರ್ನಾಟಕ ಮೀಸಲಾತಿ ಅನ್ವಯಿಸುವ ಕುರಿತು.**<br>**ಠರಾವು:**<br>ಮಾನ್ಯ ಸದಸ್ಯರಾದ ಶ್ರೀ ತ್ರಿವಿಕ್ರಮ ಜೋಶಿ ರವರು ಮಂಡಿಸಿದಂತೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿ ಅಡಿಯಲ್ಲಿ ಕಲ್ಯಾಣ–ಕರ್ನಾಟಕ ಮೀಸಲಾತಿ (ಶೇ. 80 ರಷ್ಟು) ಅನ್ವಯಿಸುವ ಕುರಿತು ಚರ್ಚಿಸಲಾಗಿ, ಈ ಬಗ್ಗೆ ವಿವರವಾದ ಟಿಪ್ಪಣಿಯನ್ನು ಶ್ರೀ ತ್ರಿವಿಕ್ರಮ ಜೋಶಿ ರವರು ಮಾನ್ಯ ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರಿಗೆ ಸಲ್ಲಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. |
| 2 | **ರಾಯಚೂರು ಕೃವಿವಿದ ವಿಭಾಗದ ಮುಖ್ಯಸ್ಥರುಗಳ ನಾಮನಿರ್ದೇಶನ ಕುರಿತು.**<br>**ಠರಾವು:**<br>ಮಾನ್ಯ ಸದಸ್ಯರಾದ ಶ್ರೀ ತ್ರಿವಿಕ್ರಮ ಜೋಶಿ ರವರು ರಾಯಚೂರು ಕೃವಿವಿದ ವಿಭಾಗದ ಮುಖ್ಯಸ್ಥರುಗಳ ನಾಮನಿರ್ದೇಶನ ಕುರಿತು ಪ್ರಸ್ತಾಪಿಸಲಾಗಿ, ಈ ಬಗ್ಗೆ ವಿವರವಾದ ಟಿಪ್ಪಣಿಯನ್ನು ಶ್ರೀ ತ್ರಿವಿಕ್ರಮ ಜೋಶಿ ರವರು ಮಾನ್ಯ ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರಿಗೆ ಸಲ್ಲಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 15–5–2020 | ಸಹಿ /– 15–5–2020 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.